**C.C 66/2013 PW 10, CW 27 ದಿನಾಂಕಃ 01-04-2026**

**ಸಾಕ್ಷಿಗೆ ವಿ ಸಿ ಮುಖಾಂತರ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್ ವಿ ಎಸ್ ವಕೀಲರಿಂದ ಆರೋಪಿ ಪರವಾಗಿ**

ಮಳಲಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ರೂ. 10 ಸಾವಿರದ ಚೆಕ್ ಅನ್ನು ಯಾವಾಗ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಕಾರ್ಯದರ್ಶಿಯಾಗಿ ಚಾಸಾ 1 ರವರು ಇದ್ದರು. ಚಾಸಾ 4 ರವರು ಸದರಿ ಸಮಯದಲ್ಲಿ ಅಧ್ಯಕ್ಷರಾಗಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೂ. 10 ಸಾವಿರದ ಚೆಕ್ಕನ್ನು ಚಾ.ಸಾ 1 ರವರು ಮಧ್ಯಾಹ್ನ ಪಂಚಾಯ್ತಿ ಕಛೇರಿಯಲ್ಲಿ ನನಗೆ ನೀಡಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ 1 ರವರು ಲೆಡ್ಜರ್ ಗೆ ನನ್ನ ಸಹಿ ಪಡೆದಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ರೂ. 10 ಸಾವಿರದ ಚೆಕ್ಕನ್ನು ಚಾಸಾ 1 ರವರು ಆಶ್ರಯ ಯೋಜನೆಯಡಿ ಮನೆ ಕಟ್ಟಲು ನೀಡಿರುತ್ತಾರೆ. ಸದರಿ ಚೆಕ್ಕನ್ನು ನಾನು ನನ್ನ ಸಿಂಡಿಕೇಟ್ ಬ್ಯಾಂಕಿನಲ್ಲಿ ನಗದೀಕರಣ ಮಾಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ಪೊಲೀಸರು ಹೇಳಿದಂತೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೂ. 10 ಸಾವಿರ ಹಣದ ಚೆಕ್ ಫೋರ್ಜರಿಯಾಗಿರುತ್ತದೆ ಎಂದು ಹೇಳಿರುವ ವಿಚಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಪ್ರಕರಣದಲ್ಲಿ ಯಾರು ಏನು ತಪ್ಪು ಮಾಡಿರುತ್ತಾರೆ ಮತ್ತು ಏನು ನಡೆದಿರುತ್ತದೆ ಎನ್ನುವ ಬಗ್ಗೆ ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯನ್ನು ವಿ ಸಿ ಮುಖಾಂತರ ವಿಚಾರಣೆಗೆ ಒಳಪಡಿಸಿ ಅವರು ನೀಡಿದ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಿ ಸಾಕ್ಷಿಗೆ ಅದನ್ನು ಓದಿ ಹೇಳಲಾಯಿತು)

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ